# ಮುನ್ನುಡಿ

ನಾನು ವೆಂಕಟರಾಂ ಅವರನ್ನು ಮೊದಲು ಭೇಟಿಯಾದದ್ದು ಸುಮಾರು ಇಪ್ಪತ್ತೈದು ವರ್ಷಗಳ ಕೆಳಗೆ – ಸಮಾಜವಾದಿ ಪಕ್ಷ ರೂಪುಗೊಳ್ಳುವ ಮೊದಲು ಮದ್ರಾಸಿನಲ್ಲಿ ನನ್ನ ಪತ್ನಿ ಸ್ನೇಹಲತಾ ಯೋಜಿಸಿದ್ದ, ಸುಮಾರು ಒಂದು ತಿಂಗಳ ಕಾಲ ನಡೆದ, ಸಮಾಜವಾದಿಗಳ ಕ್ಯಾಂಪಿನಲ್ಲಿ. ಆ ಕ್ಯಾಂಪಿನಲ್ಲಿ, ಥಿಯರಿ ಮತ್ತು ಆರ್ಗನೈಸೇಷನ್ ಒಳಗೊಂಡಂತೆ, ಸಮಾಜವಾದದ ಬೇರೆ ಬೇರೆ ಮುಖಗಳ ಬಗ್ಗೆ ಡಾ. ಲೋಹಿಯಾರಿಂದ ಭಾಷಣಗಳನ್ನು ಕೇಳುವ ಸುಯೋಗ ನಮಗೆ ಲಭಿಸಿತ್ತು. ಆಗ, ವೆಂಕಟರಾಂ ತಮ್ಮ ಸ್ಪಷ್ಟ, ಉಜ್ವಲ ಚಿಂತನೆಗಳಿಂದ ಹಾಗೂ ತಮ್ಮ ಬೆಚ್ಚಗಿನ ವ್ಯಕ್ತಿತ್ವದಿಂದ ಪ್ರತಿಯೊಬ್ಬರ ಮೇಲೂ ಪ್ರಭಾವ ಬೀರಿದರು. ಬಹಳ ಬೇಗ ಸ್ನೇಹ, ನಾನು ಮತ್ತು ವೆಂಕಟರಾಂ ಜೀವಪರ್ಯಂತ ಗೆಳೆಯರಾದೆವು. ನಾವು ಬೆಂಗಳೂರಿಗೆ ಬಂದು ವಾಸಿಸುವುದಕ್ಕೂ ಒಂದು ಮುಖ್ಯ ಕಾರಣ ವೆಂಕಟರಾಂ ಜೊತೆಗಿನ ಗೆಳೆತನ. ಈಗ ಸ್ನೇಹ ಮತ್ತು ವೆಂಕಟರಾಂ – ಇಬ್ಬರೂ ಇಲ್ಲ. ವಿಚಿತ್ರ ಯೋಗಾಯೋಗವೆಂಬಂತೆ ಅವರಿಬ್ಬರ ಪುಣ್ಯತಿಥಿಯೂ ಜನವರಿ ೨೦ ರಂದು.

ವೆಂಕಟರಾಂ ಜೊತೆ ಕಲೆ, ಸಿನೆಮಾ, ಸಾಹಿತ್ಯ, ತತ್ವಜ್ಞಾನಗಳನ್ನು ಚರ್ಚಿಸುತ್ತಾ ಅನೇಕ ಗಂಟೆಗಳನ್ನು ಕಳೆದದ್ದು ನೆನಪಾಗುತ್ತದೆ. ಈ ಎಲ್ಲಾ ವಿಷಯಗಳ ಬಗ್ಗೆ ಅವರ ದೃಷ್ಟಿ ಸ್ವಂತಿಕೆಯದಾಗಿತ್ತು. ಎಂಥಾ ಬೆಚ್ಚಗಿನ ವ್ಯಕ್ತಿತ್ವದ ಮನುಷ್ಯ ಆತ! ಸಾಯುವ ಕೆಲವೇ ದಿನಗಳ ಮುಂಚೆ ಮನೆಗೆ ಊಟಕ್ಕೆ ಬಂದಿದ್ದರು. ಕಾರಣವಿಲ್ಲದೆ ಪೊಲೀಸ್ ಲಾಕಪ್ಪಿನಲ್ಲಿ ಬಂಧಿತನಾಗಿದ್ದ ಒಬ್ಬ ಕೆಲಸಗಾರನನ್ನು ಬಿಡುಗಡೆಗೊಳಿಸಲು ನನ್ನ ಮಗಳು ನಂದನಾಗೆ ವೆಂಕಟರಾಂ ಸಹಾಯ ಬೇಕಿತ್ತು. ವೆಂಕಟರಾಂ ನಂದನಾಗೆ ಹೇಳಿದರು: ಆ ಕೆಲಸಗಾರ ತಪ್ಪಿತಸ್ಥನಲ್ಲವಾದರೆ, ಈಗಲೇ ಪೊಲೀಸ್ ಸ್ಟೇಷನ್‌ಗೆ ಹೋಗೋಣ; ತಡ

ಮಾಡುವುದು ಬೇಡ. ಹೀಗೆಂದು ಅವರಿಬ್ಬರೂ ಪೋಲೀಸ್ ಸ್ಟೇಷನ್‌ಗೆ ಹೋದರು. ಆ ದಿವಸ ನಾವು ಊಟ ಮಾಡಿದ್ದು ಸಾಯಂಕಾಲ ಐದುಗಂಟೆಗೆ, ಕೆಲಸಗಾರರಿಗೆ ಲಾಕಪ್‌ನಿಂದ ಬಿಡುಗಡೆ ದೊರಕಿಸಿದ ಮೇಲೆ.

ಕೇಂದ್ರದಲ್ಲಿ ಜನತಾ ಸರಕಾರ ಉರುಳಿದಾಗ ವೆಂಕಟರಾಂ ಕಳವಳಗೊಂಡಿದ್ದರು. ಫೆಡರಲಿಂ ಎತ್ತಿ ಹಿಡಿದು ವಾದ ಮಾಡಿದಾಗ ಅವರಿಗೆ ಭವಿಷ್ಯದ ಬಗ್ಗೆ ಪ್ರವಾದಿಯ ದೃಷ್ಟಿಯಿತ್ತು: ಭಾರತದ ಭವಿಷ್ಯದಲ್ಲಿ ನಡೆಯಲಿರುವ ರಾಜಕೀಯ ಬೆಳವಣಿಗೆಯನ್ನು ಅವರು ಮುಂದಾಗಿ ಕಂಡಿದ್ದರು. ಇವತ್ತು ಕರ್ನಾಟಕದಲ್ಲಿ ಮೊದಲನೆ ಸಲ ಜನತಾ ಸರಕಾರ ಸ್ಥಾಪಿತಗೊಳ್ಳುತ್ತಿರುವಾಗ ವೆಂಕಟರಾಂ ಇಲ್ಲಿರಬೇಕಿತ್ತು ಅನಿಸುತ್ತದೆ. ಅವರ ತ್ಯಾಗ, ಮತ್ತು ನಮ್ಮನ್ನು ಶ್ರೀಮಂತಗೊಳಿಸಿದ ಬೇರೆ ಬೇರೆ ಕ್ಷೇತ್ರಗಳಲ್ಲಿ ಅವರು ಮಾಡಿದ ಕೆಲಸಗಳು – ಇವನ್ನು ಕೃತಜ್ಞತೆಯಿಂದ ಈಗ ನೆನಪಿಸಿಕೊಳ್ಳಬೇಕಿದೆ.

ಓದಬೇಕಾದ ಪುಸ್ತಕ ಇದು – ವೆಂಕಟರಾಂ ವಿಷಯಗಳನ್ನು ನೋಡುವ ಕ್ರಮ, ಅವರ ಬುದ್ಧಿ ಮತ್ತು ಅವರಿಗಿದ್ದ ಮಾನವೀಯತೆಯ ಗಾಢ ಅರಿವಿನ ಬಗ್ಗೆ ಇದು ಒಳನೋಟ ಒದಗಿಸುತ್ತದೆ. ಈ ಪುಸ್ತಕ ವೆಂಕಟರಾಮಾಯಣದ ಸುಂದರಕಾಂಡ ಅನಿಸುತ್ತದೆ.

ಈ ಮುನ್ನುಡಿ ಬರೆಯುವ ಗೌರವವನ್ನು ನನಗೆ ಕೊಟ್ಟಿದ್ದಕ್ಕಾಗಿ ವೆಂಕಟರಾಂ ಮಗ ಪ್ರದೀಪ್ ಹಾಗೂ ಅವರ ಭಾವ ದತ್ತ– ಇವರಿಗೆ ನನ್ನ ಕೃತಜ್ಞತೆಗಳು.

ಜನವರಿ, 1983

ಪಟ್ಟಾಭಿರಾಮ ರೆಡ್ಡಿ